KAN 203.2

# ಕ್ರೆಡಿಟ್ ಆಧಾರಿತ ಎರಡನೇ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಎಪ್ರಿಲ್ 2016

## ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ

ಅಂಕಗಳು: 80

I (ಅ) ಒಂದು ಪದ್ಯದ ಭಾವಾರ್ಥ, ಸ್ವಾರಸ್ಯವನ್ನು ವಿವರಿಸಿ. 5X1=05

(1) ಏನು ವಿಜಯಂಗೈದಿರಿತ್ತಲು
ಮಾನನಿಧಿ ಕುಳ್ಳಿರಿ ಸುರೇಂದ್ರನ
ಮಾನಿನಿಯರಭಿವಂದನೀಯರು ನಾವು ಕೃತಾರ್ಥರಲ
ಏನು ಬೆಸನದೇನು ಹದ ನಿಮ
ಗಾನು ಮಗನುಪಚಾರವೇಕೆ ಮ
ನೋನುರಾಗದಲರುಹಿಯೆಂದನು ಪಾರ್ಥನೂರ್ವಶಿಗೆ ।

(2) ಊರೂರ ಸುದ್ದೀಲಿ ಜನಕೆ ಭಕ್ತಿಯು ಹುಟ್ಟಿ
ಸೇರಿತು ಪರುಸೆ ಗೋರಿದೇಬ್ರ । ಹೆಸರೇಳಿ
ಗುಡಿಯೊಂದು ನಿಂತಿತಲ್ಲೊ ಮುಗಿಲುದ್ದ

ಆ) ಎರಡರ ಸಂದರ್ಭ, ಸ್ವಾರಸ್ಯ ವಿವರಿಸಿ 3X2=06

(1) ನಾರಿ ನೀ ಪೂರ್ವದಲಿ ಪು
ರೂರವನ ಸತಿ

(2) ರಂಗ ಪುರಂದರವಿಠಲನ
ಅಂಗಣದೊಳಾಡುವ ಗಿಳಿ

(3) ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ 10X1=10

(1) ಕುಮಾರವ್ಯಾಸನ ಭಾರತ 'ವಿರಹಿಗಳ ಶೃಂಗಾರ' ಎಂಬ ಮಾತಿಗೆ 'ಊರ್ವಶಿ ಶಾಪ' ಕಾವ್ಯ ಭಾಗ ಹೇಗೆ ಪುಷ್ಟಿ ನೀಡುತ್ತದೆ?

(2) ಹೆಣ್ಣಿನ ಸ್ವಾಭಿಮಾನದ ಅಂಶಗಳು ಮಲೆಮಹದೇಶ್ವರ ಕಾವ್ಯದಲ್ಲಿ ಹೇಗೆ ಮೂಡಿವೆ? ಪದ್ಯದಲ್ಲಿರುವ ಕಾವ್ಯಭಾಗದ ಹಿನ್ನೆಲೆಯಲ್ಲಿ ಚರ್ಚಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7X1=07

(1) ಪುರಂದರ ದಾಸರ ಕೀರ್ತನೆಯಲ್ಲಿ ಗಿಳಿ ಯಾವುದಕ್ಕೆ ಸಂಕೇತ? ಕವಿ ಸಂಕೇತವನ್ನು ಹೇಗೆ ಬಳಸಿಕೊಂಡಿದ್ದಾರೆ?

(2) ಭಕ್ತಿಯ ಮೌಢ್ಯವನ್ನು 'ಕತ್ತೆ ಮತ್ತು ಧರ್ಮ' ಕವನ ಹೇಗೆ ಚಿತ್ರಿಸುತ್ತದೆ?

II ಅ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ. 10X1=10

(1) ಜ್ಯೋತಿಷ್ಯ ಅರ್ಥರಹಿತ ಎಂಬುದನ್ನು ಡಾ.ಎಚ್. ನರಸಿಂಹಯ್ಯ ಹೇಗೆ ಸಾಬೀತುಪಡಿಸಿದ್ದಾರೆ?

(2) ದೃಢವಾದ ಮನಸ್ಸಿದ್ದರೆ ಯಾವುದೇ ಸಾಧನೆ ಮಾಡಬಹುದು ಎಂಬುದಕ್ಕೆ ನಿಕ್‌ಜಿಸಿಕ್‌ನ ಬದುಕು ಹೇಗೆ ಉತ್ತಮ ಉದಾಹರಣೆಯಾಗಿದೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ 7X1=07

(1) 'ಆಯ್ಕೆ ನಮ್ಮ ಕೈಲಿದೆ' ಪ್ರಬಂಧದಲ್ಲಿ ನೇಮಿಚಂದ್ರ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಯಾವುವು?

(2) 'ಹಕ್ಕಿಯನ್ನು ನಾವು ಕೊಂದದ್ದು' ಎಂದು ಲೇಖಕರು ಹೇಳಲು ಕಾರಣಗಳೇನು?

10X1=10

III ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ

(1) ಕಪಿಲ ನಾಟಕ ಹೇಗೆ ಮಾನವೀಯ ಧರ್ಮವನ್ನು ಎತ್ತಿ ಹಿಡಿಯುತ್ತದೆ?

(2) ರಾಮ ಭಟ್ಟ ಯಜ್ಞದತ್ತರ ಮನೆಗೆ ಹೋಗಲು ಕಾರಣವೇನು?

7X1=07

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ

(1) ಲಚ್ಚಿಯ ಪಾತ್ರ ಚಿತ್ರಣ ನೀಡಿ.

(2) ಕಪಿಲ ಮತ್ತು ಅರುಂಧತಿಯರ ಪ್ರೀತಿ ಯಶಸ್ವಿಯಾಯಿತೇ? ವಿವರಿಸಿ.

3X2=06

ಇ) ಎರಡರ ಸಂದರ್ಭ, ಸ್ವಾರಸ್ಯ ವಿವರಿಸಿರಿ

(1) 'ಗಂಡಸಿಗೆ ಅಶುದ್ಧಿ ಎಂಬುದೇ ಇಲ್ಲ.'

(2) 'ಏನಾದರೂ ವರ್ಣಸಂಕರ ಮಾಡಿ ಧರ್ಮ ಹಾಳು ಮಾಡಿದ ಅವನು.'

(3) 'ಈ ಯಾವ ತಾರತಮ್ಯಗಳಿಲ್ಲದ ಜಗತ್ತೊಂದಿರುವುದಾದರೆ ಅದನ್ನು ಹುಡುಕುತ್ತಾ ಹೋಗೋಣ.'

3X2=06

IV ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.

(1) ಸರ್ವಜ್ಞ

(2) ಕುಮಾರವ್ಯಾಸ

(3) ಮಲೆಮಹದೇಶ್ವರ

1X6=06

ಆ) ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ

(1) ಕುಮಾರವ್ಯಾಸ ರಚಿಸಿದ ಕಾವ್ಯ ಯಾವುದು?

(2) ಸಿದ್ಧಲಿಂಗಯ್ಯನವರ ಆತ್ಮಕಥನ ಯಾವುದು?

(3) 'ಮಾನವನಾಸೆಗೆ ಕೊನೆಯೆಲ್ಲಿ' ಹಾಡು ಬರೆದವರು ಯಾರು?

(4) 'ಜ್ಯೋತಿಷ್ಯ–ಅರ್ಥಪೂರ್ಣವೊ ಅರ್ಥರಹಿತವೊ' ಲೇಖನ ಬರೆದವರು ಯಾರು?

(5) 'ಕಪಿಲ' ನಾಟಕ ರಚಿಸಿದವರು ಯಾರು?

(6) 'ಮಲೆ ಮಹದೇಶ್ವರ ಕಾವ್ಯ' ರಚಿಸಿದವರು ಯಾರು?

*****

KAN 203.2 Reg. No. ....................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

ಏಪ್ರಿಲ್ 2015

ಕನ್ನಡ ಭಾಷಾ ಪತ್ರಿಕೆ – II

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಕೆಳಗಿನವುಗಳಲ್ಲಿ ಒಂದು ಪದ್ಯದ ಭಾವಾರ್ಥ ಬರೆಯಿರಿ: 05

1) ಹಸಿದ ಮಾರಿಯ ಮಂದೆಯಲಿ ಕುರಿ
ನುಸುಳಿದಂತಾದೆನು ಬೃಹನ್ನಳೆ
ಯೆಸಗದಿರು ತೇಜಿಗಳ ತಡೆ ಚಮ್ಮಟಿಕೆಯನು ಬಿಸುಡು
ಮಿಸುಕ ಬಾರದು ಪ್ರಳಯ ಕಾಲನ
ಮುಸುಕನುಗಿವವನಾರು ಕೌರವ
ನಸಮಬಲನ್ಯೈ ರಥವ ಮರಳಿಚು ಜಾಳಿಸುವೆನೆಂದ

2) ಪರುಷ ಲೋಹವ ಮುಟ್ಟೆ ವರುಷವಿರಬಲ್ಲುದೇ
ವರುಷವೆಂತಂತೆ ಶಿಷ್ಯಂಗೆ ಗುರುವಿನ
ಸ್ಪರುಷವೆ ಮೋಕ್ಷ ಸರ್ವಜ್ಞ

ಆ) **ಎರಡರ** ಸಂದರ್ಭ ಸ್ವಾರಸ್ಯ ವಿವರಿಸಿ: 06

1) ಖಳನ ಮುರಿವೆನು ಹಸ್ತಿನಾಪುರದೊಳಗೆ ಠಾಣಂತರವನಿಕ್ಕುವೆ
2) ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ
3) ಒಂಬತ್ತು ಬಾಗಿಲ ಮನೆಯೊಳು ತುಂಬಿದ ಸಂದಣಿ ಇರಲು

ಇ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ: 10

1) ಉತ್ತರ ಕುಮಾರನ ಪಾತ್ರವನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದನೆ?
2) ಸರ್ವಜ್ಞನ "ದೇವನೊಲಿದಾತನೇ ಜಾತ" ವಚನಗಳಲ್ಲಿ ಯಾವ ಯಾವ ವಿಚಾರಗಳು ಮೂಡಿ ಬಂದಿವೆ?

ಈ) ಪದ್ಯ ಭಾಗದಿಂದ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾದ ಉತ್ತರ ಬರೆಯಿರಿ: 07

1) ಗಂಡ ಮತ್ತು ಹೆಂಡತಿಯ ನಡುವೆ ಪಾತಿವ್ರತ್ಯಕ್ಕೆ ಸಂಬಂಧಿಸಿ ಭಾಷೆ ನೀಡುವುದನ್ನು ಸಂಕಣ್ಣು ಏಕೆ ನಿರಾಕರಿಸುತ್ತಳೆ ಚರ್ಚಿಸಿ.
2) ಮನುಷ್ಯನ ಸ್ವಾರ್ಥ ಬುದ್ಧಿಯನ್ನು ಚಿ.ಉದಯಶಂಕರ್ ತನ್ನ ಕವನದಲ್ಲಿ ಹೇಗೆ ನಿರೂಪಿಸಿದ್ದಾರೆ?

II. ಅ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ: 10

1) ಆತ್ಮಸ್ಥೈರ್ಯ, ಮನೋಬಲ ಮತ್ತು ಮನಸ್ಸಿದ್ದರೆ ಯಾವುದೇ ಸಾಧನೆಯನ್ನು ಮಾಡಬಹುದೆಂಬುದನ್ನು ಎ.ಆರ್.ಮಣಿಕಾಂತ್ 'ಕೈಯ್ಯೂ ಇಲ್ಲ ಕಾಲೂ ಇಲ್ಲ' ಲೇಖನದಲ್ಲಿ ಹೇಗೆ ವಿವರಿಸಿದ್ದಾರೆ?
2) 'ಸಾಹಿತ್ಯ ಮತ್ತು ವಿಜ್ಞಾನ ಎರಡೂ ಸತ್ಯದ ಅನ್ವೇಷಣೆಯ ಬೇರೆ ಬೇರೆ ಮಾಧ್ಯಮಗಳು" ಎಂಬುದನ್ನು ನೇಮಿಚಂದ್ರ ಹೇಗೆ ಪ್ರಸ್ತುತಪಡಿಸಿದ್ದಾರೆ?

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ: **07**

1) 'ನಾವು ಕೊಂದ ಹಕ್ಕಿ' ಈ ಲೇಖನದ ಸ್ವಾರಸ್ಯವನ್ನು ನಿರೂಪಿಸಿ.
2) ಜ್ಯೋತಿಷ್ಯ-ಶಾಸ್ತ್ರದ ಸತ್ಯಾಸತ್ಯತೆಯನ್ನು ಡಾ.ಎಚ್. ನರಸಿಂಹಯ್ಯ ಹೇಗೆ ಚರ್ಚಿಸಿದ್ದಾರೆ?

**III.** ಅ) **ಒಂದು** ಪ್ರಶ್ನೆಗೆ ದೀರ್ಘ ಉತ್ತರ ಬರೆಯಿರಿ: **10**

1) ವಿಶ್ವಾಮಿತ್ರ ಮತ್ತು ಹರಿಶ್ಚಂದ್ರರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.
2) "ದೃಷ್ಟಿ" ನಾಟಕದಲ್ಲಿ ಬರುವ ಹರಿಶ್ಚಂದ್ರನ ಪಾತ್ರವನ್ನು ವಿಮರ್ಶೆ ಮಾಡಿ.

ಆ) ಎರಡರಲ್ಲಿ **ಒಂದು** ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ: **07**

1) "ಪುತ್ರ ವ್ಯಾಮೋಹ ಅನ್ನುವುದು ಸಾಮಾನ್ಯ ಮೋಹದಂತಲ್ಲ ಭಗವಾನ್ ಬಹುಕಾಲ ಬಯಸಿ ಬಂದ ಭಾಗ್ಯ ಎಂಬ ಹರಿಶ್ಚಂದ್ರನ ಹೇಳಿಕೆಯನ್ನು ನಾಟಕದ ಹಿನ್ನೆಲೆಯಲ್ಲಿ ವಿವರಿಸಿರಿ.
2) "ಮಹತ್ವಾಕಾಂಕ್ಷೆ ಎನ್ನುವುದು ಕೊನೆಯಿಲ್ಲದ ಶಿಖರ, ಅದನ್ನು ಏರುತ್ತಲೇ ಇರಬೇಕು ಹೊರತು ನಿಲುಗಡೆಗೆ ಅಲ್ಲಿ ಅವಕಾಶವಿಲ್ಲ" ಎಂಬ ಆಂದ್ರಕನ ಹೇಳಿಕೆಯ ತಾತ್ಪರ್ಯವೇನು?

ಇ) ಮೂರರಲ್ಲಿ ಎರಡರ ಸಂದರ್ಭ: **06**

1) ಎಷ್ಟಾದರೂ ಕ್ಷತ್ರಿಯರಲ್ಲವೆ? ತಪ್ಪು ಮಾಡುವುದು ಆಮೇಲೆ ಕ್ಷಮೆ ಕೋರುವುದು ನಿಮ್ಮ ಜನ್ಮಸಿದ್ಧ ಹಕ್ಕು.
2) ಯಾವ ಹೆಸರಿನಿಂದ ಕರೆದರೂ ಎಂಜಲು ತೀರ್ಥವೆನಿಸುವುದಿಲ್ಲ.
3) ಕಂಡವರ ಮಕ್ಕಳನ್ನು ಬಾವಿಗೆ ದೂಡಿ ಆಳನೋಡುವ ಯೋಜನೆ ನಿನಗೆ.

**IV.** ಅ) ಎರಡಕ್ಕೆ ಟಿಪ್ಪಣಿ: **06**

1) ಸಿದ್ಧಲಿಂಗಯ್ಯ
2) ನೇಮಿಚಂದ್ರ
3) ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಆ) ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿರಿ: **06**

1) ಕುಮಾರವ್ಯಾಸನು ಬರೆದ ಕಾವ್ಯದ ಹೆಸರೇನು?
2) ಸಿರಿ ಹೋದ ಬಳಿಕ ಹಿರಿಯಣ್ಣ ಏನಾಗುತ್ತಾನೆ.
3) ಸಿದ್ಧಯ್ಯನ ಒಡನಾಟ ಯಾರೊಂದಿಗೆ?
4) ಮಲೆ ಮಾದೇಶ್ವರ ಕಾವ್ಯವನ್ನು ಯಾವ ಜನಾಂಗದವರು ಹಾಡುತ್ತಾರೆ?
5) 'ಮಾನವನಾಸೆಗೆ ಕೊನೆ ಎಲ್ಲಿ' ಪದ್ಯ ಬರೆದವರು ಯಾರು?
6) ಡಾ.ಎಚ್.ನರಸಿಂಹಯ್ಯ ಯಾವ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು?

**********

KAN 202.2

Reg. No. ..................................

# ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

## ಏಪ್ರಿಲ್ 2014

## ಕನ್ನಡ ಭಾಷಾ ಪತ್ರಿಕೆ – II

ಅವಧಿ: 3 ಗಂಟೆಗಳು

ಒಟ್ಟು ಅಂಕಗಳು: 80

I. ಅ) ಒಂದು ಪದ್ಯ ಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ: 05

1) ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ ಆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯನರಿತು ನೀ ಹರಿಯ ನೆನೆ ಮನುಜ

2) ಕಲ್ಲಿನಾಥ ನಿನ ಎದುರಿನಲ್ಲಿ ನಾ
ಕಲ್ಲಿ ಹಾದು ಬಿಡುವೆನು ಪ್ರಾಣ
ಕಲ್ಲ ಹಾದು ಬಿಡುವೆನು ಪ್ರಾಣ। ನೀ
ಹಾಲು ಕುಡಿಯದಿರೆ ಕೇಳಿನ್ನು

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ: 06

1) ಬಡವನ್ ದೇವ್ರಿಗ್ ನರಳಿಸ್ತಿದ್ರೆ ಲೋಕಕ್ಕೆ ಬೆಳಕೇ ಇಲ್ಲ!
2) ಈ ನಾಣ್ಯ ನಾಚಿ ನೀರಾಗಿ ಹರಿದು ಹೋಗುವುದಿಲ್ಲ
3) ನನ್ನ ತಮ್ಮನಿಗೇಳು ಅವರ ಮನೆಗೋಗಲು ರೆಡಿಯಾಗೆಂದು

ಇ) ಒಂದು ಪ್ರಶ್ನೆಗೆ ಉತ್ತರಿಸಿ: 10

1) ಕುಲದ ಕುರಿತಾದ ಚಿಂತನೆ ಕನಕದಾಸರ ಕೀರ್ತನೆಗಳಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.
2) ಕೋಳೂರ ಕೊಡಗೂಸುವಿನ ಮುಗ್ಧ ಭಕ್ತಿಯನ್ನು ವಿವರಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) ಬಡತನ ಮತ್ತು ಹಸಿವಿನ ತೀವ್ರತೆಯನ್ನು 'ಬಡವ್ನೋನ್ ದೇವ್ರು' – ಕವನ ಹೇಗೆ ನಿರೂಪಿಸಿದೆ?
2) 'ಎಲ್ಲೂ ಸಲ್ಲುವ ನಾಣ್ಯ'–ಕವಿತೆಯ ಆಶಯವನ್ನು ನಿರೂಪಿಸಿರಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ಸಾಪಿನ ಆಟದ ಗೌಪ್ಯ ಕಥನವು 'ಯಯಾತಿಯ ಕಾತರಕ್ಕೆ ಕೊನೆಯೇ ಇಲ್ಲವೇ' ಲೇಖನದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.
2) ತೇಜಸ್ವಿಯವರ ತಾಯಿ ಹಾಲಿಗಾಗಿ ಎಮ್ಮೆ ಸಾಕಿದ ಸನ್ನಿವೇಶವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 07

1) 'ಜೀವನದ ದಾರಿಯಲ್ಲಿ ಅಭಿವೃದ್ಧಿಗೆ ಕಾರಣರು' ಲೇಖನದ ಆಶಯವನ್ನು ನಿರೂಪಿಸಿರಿ.
2) ಸಂವೇದನ ಹೀನ ಮನೋಧರ್ಮದ ಕುರಿತು ರಹಮತ್ ತರೀಕೆರೆ ವ್ಯಕ್ತಪಡಿಸುವ ನಿಲುವುಗಳನ್ನು ಬರೆಯಿರಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: 06

1) ಪ್ರಬಂಧದ ಸ್ವರೂಪವನ್ನು ವಿವರಿಸಿ.
2) ಸಂವಹನ ಮಾಧ್ಯಮವಾಗಿ ಪತ್ರಿಕೆಯ ಸ್ವರೂಪ ಹಾಗೂ ಮಹತ್ವವನ್ನು ತಿಳಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 03

1) ಉತ್ತಮ ಪ್ರಬಂಧ ರಚನೆಗೆ ಅನುಸರಿಸಬೇಕಾದ ಸೂತ್ರಗಳನ್ನು ತಿಳಿಸಿ.
2) ದೂರವಾಣಿಯ ಮಹತ್ವವನ್ನು ತಿಳಿಸಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ: 10

1) ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿನ ದುರಂತ 'ಕಪಿಲ' ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.
2) ಕಪಿಲನ ಬದುಕಿನ ಅನನ್ಯತೆಯನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ: 05

1) ಅರುಂಧತಿಯ ವ್ಯಕ್ತಿತ್ವವನ್ನು ವಿವರಿಸಿರಿ.
2) ಲಚ್ಚಿಯ ದುರಂತ ಬದುಕನ್ನು ಚಿತ್ರಿಸಿರಿ.

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: 06

1) ಕನಕ–ಕೃಷ್ಣರ ಸಂಬಂಧ
2) ಕನಕದಾಸರು
3) ಜಿ.ಪಿ. ರಾಜರತ್ನಂ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ: 05

1) 'ರತ್ನನ ಪದಗಳು' ಯಾರ ಕೃತಿಯಾಗಿದೆ?
2) 'ಮಹಾಚೈತ್ರ' ನಾಟಕ ಬರೆದವರು ಯಾರು?
3) ಯಜ್ಞದತ್ತನ ಪುತ್ರನ ಹೆಸರೇನು?
4) ಶಿವರಾಮ ಕಾರಂತರ ಜ್ಞಾನಪೀಠ ಪ್ರಶಸ್ತಿ ಪಡೆದ ಕಾದಂಬರಿ ಯಾವುದು?
5) 'ಸಂಗೀತ ಪೆಟ್ಟಿಗೆ' ಎಂದು ಜನಪ್ರಿಯವಾಗಿರುವ ಮಾಧ್ಯಮ ಯಾವುದು?

**********

KAN 201.1(R) Reg. No. ..................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯು ಪದವಿ ಪರೀಕ್ಷೆ

ಏಪ್ರಿಲ್ 2013

ಕನ್ನಡ ಭಾಷಾ ಪತ್ರಿಕೆ - II

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 70

I. ಅ) ಕೆಳಗಿನ ಪದ್ಯಭಾಗಗಳಲ್ಲಿ ಒಂದರ ಭಾವಾರ್ಥವನ್ನು ಬರೆಯಿರಿ. 05

1) ಮಾಸಿದ ಮುಖದಾಗೆ ಮಿಂಚೊಂದು ಬರುತ್ಯೆತೆ
ಒಳಗಿಳಿದು ಹೊಳೆಹೊಳೆಯ ಮನಸನ್ನು ಸುಡುತ್ಯೆತೆ
ಮುಟ್ಟಬಾರದ್ಯಾಕೆ ಮ್ಯಾಲಿನ ದೊಣೆನೀರು?
ಗಂಗೀ ಹಳ್ಳವು ನಮ್ಮ ಪಾಲಿಗಿಲ್ಲವ್ಯಾಕೆ?
ಮನುಸರಲ್ಲವೆ ನಾವು ಮನುಸರಲ್ಲವೆ?
ಕೆಂಪಲ್ಲವೆ ನಮ್ಮ ರಕುತ ಕೆಂಪಲ್ಲವೆ?

ಅಥವಾ

2) ಗಂಭೀರವೆಂಬುದು ಸರ್ವಗುಣಗಳೆಂಬ।
ಅಂಭೋಧಿಯಾದಿಯಾಗಿಹುದೂ॥
ಗಂಭೀರಬೇಕು ರಾಜಗು ಯೋಗಿರಾಜಗು।
ಗಂಭೀರಕೆಟ್ಟರೇನುಂಟು॥

ಆ) ಈ ಕೆಳಗಿನವುಗಳಲ್ಲಿ ಎರಡರ ಸಂದರ್ಭವನ್ನು ವಿವರಿಸಿ. 06

1) ಪುಣ್ಣೇವು ತುಂಬ್ಯೆತೆ ಈ ಊರ ತುಂಬ
2) ಅವನ ಚೆಲ್ವಿಕೆ ಗಂಡು ಪೆಣ್ಗಳ ಕಂಗಳ ಸೆರೆವಿಡಿದಿಹುದು
3) ಮಲ್ಲಿಗೆಯ ಬಳ್ಳಿ ಬಿಸಿನೀರೆರೆಯುವರೆ?

ಇ) ತಾಯಿಯ ಅವಹೇಳನವನ್ನು ಸಹಿಸದ ಬಬ್ರುವಾಹನ ಅರ್ಜುನನ ಮೇಲೆ ಹೇಗೆ ಪ್ರತೀಕಾರವನ್ನು ಎಸಗುತ್ತಾನೆ? ವಿವರಿಸಿ. 08

ಅಥವಾ

ತಂಗಿಗೆ ಅನ್ಯಾಯ ಬಗೆಯಲು ಹೊರಟ ಅಣ್ಣನಿಗೆ ಸಿಕ್ಕಿದ ಪ್ರಾಯಶ್ಚಿತವನ್ನು 'ನಾಗರಪಂಚಮಿ ಪದ'ದ ಹಿನ್ನೆಲೆಯಲ್ಲಿ ವಿವವಿಸಿ.

ಈ) ಕಣ್ವಾಶ್ರಮದಲ್ಲಿ ಬೆಳೆದ ಶಕುಂತಲೆಯನ್ನು ನಾಗರಿಕ ಜಗತ್ತಿನ ಪ್ರತಿನಿಧಿಯಾಗಿ ದುಷ್ಯಂತ ವರಿಸಿದ ಸಂದರ್ಭವನ್ನು ವಿವರಿಸಿ. 05

ಅಥವಾ

ಕ್ರಾಂತಿಕಾರನಾದ ಮಾವೋತ್ಸೆತುಂಗನ ಕುರಿತು ಕಂಬಾರರ ಅಭಿಪ್ರಾಯಗಳೇನು? ವಿವರಿಸಿ.

II. ಅ) 'ಲಾಕ್‌ರೂಪ್ಯಾದೇನಾ ನಹಿತರ್ ನರ್ಸಪ್ಪ ಬೋಲ್ನಾ' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿ. 08

ಅಥವಾ

ಇಬ್ಬರು ಮಹಿಳೆಯರ ಸಾಧನೆಗಳನ್ನು ಕುರಿತು ಬರೆಯಿರಿ.

ಆ) 'ಹಲ್ಲಿ' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿ.

ಅಥವಾ

ನಮ್ಮಲ್ಲಿ ಅಪಾರ ಶಕ್ತಿ ಇದೆಯೇ ಸಮರ್ಥಿಸಿರಿ.

III. ಅ) ಮಂಥರಾ ನಾಟಕದ ಮೂಲಕ ನಾಟಕಕಾರರು ಪ್ರತಿಪಾದಿಸುವ ಮೌಲ್ಯವನ್ನು ವಿವೇಚಿಸಿರಿ.

ಅಥವಾ

ಕೈಕೆಯಿ ಮತ್ತು ಮಂಥರೆಯ ಪಾತ್ರಗಳನ್ನು ಪರಿಚಯಿಸಿರಿ.

ಆ) ದಶರಥನ ಪರಿಸ್ಥಿತಿಯು ನೋಡಿದವರ ಮನಕಲಕುವಂತಿತ್ತು ಹೇಗೆ? ವಿವರಿಸಿ.

ಅಥವಾ

ರಾಮನು ಪಿತೃವಾಕ್ಯ ಪರಿಪಾಲನೆ ಮಾಡಿದ ಸಂದರ್ಭವನ್ನು ವಿವರಿಸಿ.

IV. ಅ) ಸರಕಾರಿ ಪತ್ರದ ವಿವಿಧ ಅಂಗಗಳು ಯಾವುವು? ಉದಾಹರಣಾಪತ್ರದೊಂದಿಗೆ ಪರಿಚಯಿಸಿರಿ.

ಅಥವಾ

ನಿಘಂಟು ಎಂದರೇನು? ನಿಘಂಟುಗಳ ವಿಧಗಳನ್ನು ಕುರಿತು ಬರೆಯಿರಿ.

ಆ) ಕನ್ನಡ ನಿಘಂಟುಗಳ ಕಿರುಚರಿತ್ರೆಯನ್ನು ಬರೆಯಿರಿ.

ಅಥವಾ

ನಿಘಂಟು ರಚನೆಯ ಸಂದರ್ಭದಲ್ಲಿ ಇರಬೇಕಾದ ಪ್ರಮುಖ ಅಂಶಗಳನ್ನು ಪಟ್ಟಿಮಾಡಿ.

V. ಅ) **ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ.**

1. ಮಾಪೋತ್ಸೆತುಂಗ
2. ದುಷ್ಯಂತ
3. ಕುರಿಯಂತೆ ವರ್ತಿಸಿದ ಹುಲಿ

ಆ) **ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಭರತನ ತಾಯಿ ಯಾರು?
2. ಪಂಜೆಯವರ ಕಾವ್ಯನಾಮ ಯಾವುದು?
3. ಎಲ್ಲ ದಿಕ್ಕುಗಳಿಂದ ಹೊಸಗಾಳಿ ಬೀಸುತ್ತಿರಲಿ ಎಂದವರು ಯಾರು?
4. ಬಬ್ರುವಾಹನನ ತಾಯಿ ಯಾರು?
5. ರತ್ನಾಕರವರ್ಣಿ ರಚಿಸಿದ ಕಾವ್ಯ ಯಾವುದು?

*********************

KAN 202.2 Reg. No. ....................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ ಏಪ್ರಿಲ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. 1x5=5

1) ಸಾಯಬೇಡ ಕಂದ ಕುಡಿಯುವೆ ಹಾಲ
ಬಳಲಬೇಡ ನೀನಂಬುತ
ಬಳಲಬೇಡ ನೀನಂಬುತ । ಹಾಲು
ಕುಡಿದನು ಶಿವ ತಾ ನಕ್ಕೊಂಡ

ಅಥವಾ

2) ಕನಕನಿಗೆ ಹಾಡು ಕಟ್ಟುವ ಹುಚ್ಚು
ಕೃಷ್ಣನಿಗೆ ಕೊಳಲು ಅಚ್ಚುಮೆಚ್ಚು
ಗೆಳೆತನ ಕುದುರಿತು ಹೆಚ್ಚೇನಿಲ್ಲ

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಆ ಸಾಲುಗಳ ಸ್ವಾರಸ್ಯವನ್ನು ವಿಶದಪಡಿಸಿರಿ. 2×3=6

1) ಬಗೆವರೆ ನಾರಾಯಣನ್ಯಾವ ಕುಲದವ
2) ಸಾಯೋರ್ ಜತೆಗೇ ಸಾಯೋ ಬದಲು ಎಲ್ಲಾರ್ ಸಂಗ್ಡ ಬಾಳು।
3) ನನ್ನ ಮೌಲ್ಯ ಇಗೋ ಇಷ್ಟು

ಇ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ. 1x10=10

1) ಕೊಡಗೂಸಿನ ಭಕ್ತಿ ಪ್ರಕಟವಾದ ಸಂದರ್ಭವನ್ನು ನಿರೂಪಿಸಿರಿ.
2) 'ಬಡವ್ರೋನ್ ದೇವ್ರು' ಕವನ ಬಡತನ ಮತ್ತು ಕನಸಿನ ತೀವ್ರತೆಯನ್ನು ಹೇಗೆ ಚಿತ್ರಿಸಿದೆ?

ಈ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. 1x7=7

1) ಕುಲವನ್ನು ಕುರಿತೆ ಕನಕದಾಸರ ಅಭಿಪ್ರಾಯಗಳನ್ನು ಬರೆಯಿರಿ.
2) 'ಅಪ್ಪನಿಗೆ ಒಂದು ಪತ್ರ' ಕವನದ ಆಶಯವನ್ನು ಬರೆಯಿರಿ.

II. ಅ) ಒಂದಕ್ಕೆ ಉತ್ತರಿಸಿರಿ. 1x10=10

1) 'ತುರುಚೆ ಸೊಪ್ಪಿನ ಚಿಕಿತ್ಸೆ' ಲೇಖನದಲ್ಲಿ ತೇಜಸ್ವಿಯವರು ಚಿತ್ರಿಸಿರುವ ಅನುಭವಗಳ ಸ್ವಾರಸ್ಯವನ್ನು ನಿರೂಪಿಸಿರಿ.
2) ಜೀವ ಸಂಕುಲಗಳನ್ನು ನಾಶಮಾಡುವ ಮನುಷ್ಯ ಪ್ರವೃತ್ತಿಯನ್ನು 'ಕೇಳುವವರಿಲ್ಲದ ಸಾವು' ಲೇಖನ ಹೇಗೆ ಚಿತ್ರಿಸಿದೆ?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1x7=7

1) 'ಜೀವನ ದಾರಿಯಲ್ಲಿ ಅಭಿವೃದ್ಧಿಗೆ ಕಾರಣರು' ಲೇಖನದಲ್ಲಿ ವ್ಯಕ್ತವಾಗಿರುವ ಕಾರಂತರ ನಿಲುವುಗಳನ್ನು ವಿವರಿಸಿರಿ.
2) ಮನುಷ್ಯ ಬದುಕನ್ನು ನಿಯಂತ್ರಿಸುವ ನೆಲೆಯನ್ನು ಕುರಿತು ಲಂಕೇಶರ ಅಭಿಪ್ರಾಯಗಳನ್ನು ವಿವರಿಸಿ.

III. ಅ) ಒಂದಕ್ಕೆ ಉತ್ತರಿಸಿರಿ. 1x10=1

1) ನಮ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ತಾರತಮ್ಯ 'ಕಪಿಲ' ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ

2) ಕಪಿಲನ ವ್ಯಕ್ತಿತ್ವವನ್ನು ನಾಟಕ ಹೇಗೆ ಚಿತ್ರಿಸಿದೆ? ವಿವರಿಸಿರಿ.

ಆ) ಒಂದಕ್ಕೆ ಉತ್ತರಿಸಿರಿ. 1x5=

1) ಆರುಂಧತಿಯ ಪಾತ್ರ ಚಿತ್ರಣ ನೀಡಿರಿ.

2) ಲಚ್ಚಿಯ ಬದುಕನು ಚಿತ್ರಿಸಿರಿ.

IV. ಅ) ಒಂದಕ್ಕೆ ಉತ್ತರಿಸಿರಿ. 1x6=

1) ಪ್ರಬಂಧವೆಂದರೇನು? ಪ್ರಬಂಧದ ಶೈಲಿ ಹೇಗಿರಬೇಕು?

2) ಪತ್ರಿಕೆಗಳ ಸ್ವರೂಪವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1x3=

1) ಜಾಹೀರಾತಿನ ಭಾಷೆಯ ಕುರಿತು ಬರೆಯಿರಿ.

2) ಸಿನಿಮಾವನ್ನು ಕುರಿತು ಬರೆಯಿರಿ.

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. 2x3=

1) ಎಚ್.ಎಸ್.ಶಿವಪ್ರಕಾಶ್

2) ಸವಿತಾ ನಾಗಭೂಷಣ

3. ಪಿ. ಲಂಕೇಶ್

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ. 1x5=

1) ಕನಕದಾಸರ ಹುಟ್ಟೂರು ಯಾವುದು?

2) ಶಿವರಾಮ ಕಾರಂತ ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿ ಯಾವುದು?

3) 'ಟೀಕೆ ಟಿಪ್ಪಣಿ' ಯಾರ ಕೃತಿ.

4) 'ವಾಯ್ಸ್ ಮೆಯಿಲ್' ಎಂದರೇನು?

5) ಕೇಳುವವರಿಲ್ಲದ ಸಾವು – ಲೇಖನವನ್ನು ಬರೆದವರು ಯಾರು?

******************